**CC 1049/202**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1049/2022

**ಸಿ ಡಬ್ಲೂ** -8
**ಪಿ ಡಬ್ಲೂ** -6

| | |
|---|---|
| **ಸಾಕ್ಷಿಯ ಹೆಸರು -** | **ಹುಲುಗಪ್ಪ** |
| **ತಂದೆಯ ಹೆಸರು -** | **ಅಂಜಿನಪ್ಪ** |
| **ವಯಸ್ಸು -** | 48 **ವರ್ಷಗಳು** |
| **ಉದ್ಯೋಗ -** | **ಖಾಸಗಿ ಕೆಲಸ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 06-08-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನ್ನ ಮನೆ ಎಸ್ ಎಲ್ ಚೌಕಿ ಪ್ರದೇಶದಲ್ಲಿ ಇದೆ. ದಿಃ **20-02-2022** ರಂದು ನಾನು ಮಲಗಿದ್ದಾಗ ನಮ್ಮ ಮನೆಯ ಹತ್ತಿರದ ಚಾಸಾ **-1** ರವರ ಮನೆಯ ಬಳಿ ರಾತ್ರಿ **11-11.30** ಸಮಯಕ್ಕೆ ಗಲಾಟೆ ಆಗಿದ್ದರಿಂದ ನಾನು ಎದ್ದು ಹೋಗಿ ನೋಡಿರುತ್ತೇನೆ. ಸ್ಥಳದಲ್ಲಿ ಆರೋಪಿ ಚಾಸಾ **-1** ರವರೊಂದಿಗೆ ಮತ್ತು ಅವರ ಅಕ್ಕ ನೊನಂದಿಗೆ ಜಗಳ ಮಾಡಿರುತ್ತಾನೆ. ಚಾಸಾ **-1** ರವರ ಅಕ್ಕಳನ್ನು ಕುರಿತು ಆರೋಪಿಯು " ನೀನು ಬಾ ನಿನ್ನೊಂದಿಗೆ ಸಂಸಾರ ಮಾಡುತ್ತೇನೆ " ಎಂದು ಕರೆದಿರುತ್ತಾನೆ.

ಅದಕ್ಕೂ ಮೊದಲು ಚಾಸಾ **-1** ವುತ್ತು ಆರೋಪಿ ತಾಯಿಯ ಮನೆಯ ಹತ್ತಿರವೇ ಬಾಡಿಗೆ ಮನೆಯೊಂದನ್ನು ಮಾಡಿದ್ದರು ಅಲ್ಲಿ ಸಹ ಆರೋಪಿ ಸರಿಯಾಗಿ ಸಂಸಾರ ಮಾಡದೇ **3** ದಿನಗಳಲ್ಲಿಯೇ ಚಾಸಾ **-1** ರವರೊಂದಿಗೆ ಜಗಳ ಮಾಡಿಕೊಂಡಿದ್ದ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ದಿನ

ಕಾರಾಗೃಹದಿಂದ ವಿಡಿಯೋ ಕಾನಪರನ್ಸಿಂಗ್ ನಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ಚಾಸಾ -1 ರವರು ಆರೋಪಿಯೊಂದಿಗೆ ಪ್ರೇಮ ವಿವಾಹ ಆಗಿದ್ದರು ಅಂದರೆ ಸರಿ. ಮದುವೆಯಾದ ನಂತರ ಚಾಸಾ -1 ಆರೋಪಿ ಮನೆ ಇರುವ ಹೊಸಲಿಂಗಾಪುರದಲ್ಲಿ ವಾಸವಿದ್ದರು ಅಂದರೆ ಸರಿ. ಆರೋಪಿ ಕುಡಿದು ಬಂದು ಚಾಸಾ -1 ರವರಿಗೆ ಬೈಯುವುದು, ಹೊಡೆ ಬಡೆ ಮಾಡುವುದು ಮಾಡಿ ಕಿರುಕುಳ ನೀಡಿದ್ದ ಮತ್ತು ಆ ವಿಚಾರ ಚಾಸಾ -1 ರವರ ತಾಯಿಗೆ ಗೊತ್ತಾಗಿತ್ತು ಅಂದರೆ ಸರಿ. ಆರೋಪಿಗೆ ಸಾಕಷ್ಟು ಬಾರಿ ಬುುದ್ಧಿವಾದ ಹೇಳಿದರೂ ತಿದ್ದಿ ಕೊಳ್ಳದೇ ಚಾಸಾ -1 ರವರಿಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಾ ಬಂದಿದ್ದ ಅಂದರೆ ಸರಿ. ಚಾಸಾ -1 ರವರ ತಾಯಿ ಬಾಡಿಗೆ ಮನೆ ಮಾಡಿ ಕೊಟ್ಟಾಗ ಅಲ್ಲಿಯೂ ಸಹ ಆರೋಪಿ ತನ್ನ ಕೃತ್ಯಗಳನ್ನು ಪುನರಾವರ್ತಿಸಿದ್ದ ಅಂದರೆ ಸರಿ. ಚಾಸಾ -1 ರವರ ತಾಯಿ ಬುದ್ಧಿವಾದ ಹೇಳಿದಾಗ ಆರೋಪಿ ಆಕೆಗೆ ಜೀವ ಬೆದರಿಕೆ ಹಾಕಿದ್ದ ಅಂದರೆ ಸರಿ. ಸದರಿ ಮನೆಯಲ್ಲಿ ಆರೋಪಿ ಸಂಸಾರ ಮಾಡದೇ ತನ್ನ ಊರಿಗೆ ಹಿಂತಿರುಗಿದ್ದರಿಂದ ಚಾಸಾ -1 ರವರು ತನ್ನ ತಾಯಿಯ ಮನೆಯಲ್ಲಿ ವಾಸವಿದ್ದರು ಅಂದರೆ ಸರಿ.

ಆರೋಪಿ ಚಾಸಾ -1, ಅವರ ತಾಯಿ ಮತ್ತು ಅಕ್ಕ ವಾಸವಿದ್ದ ಮನೆಯ ಹತ್ತಿರ ಆಗಾಗ್ಗೆ ಬಂದು ಜಗಳ ತೆಗೆದು ಅವರನ್ನು ವೇಶ್ಯಾವಾಟಿಕೆಗೆಸಿ ಕಳುಹಿಸುತ್ತೇನೆ

ಎಂದು ಅವಾಚ್ಯ ಶಬ್ದಗಳಿಂದ ಬೈದು ಕಿರುಕುಳ ನೀಡಿರುತ್ತಾನೆ ಅಂದರೆ ಸರಿ. ಆತ ಜಗಳ ಮಾಡುತಿತದಾದನೆ ಎಂದು ಚಾಸಾ -1 ದೂರನ್ನು ಸಹ ನೀಡಿದ್ದರು ಅಂದರೆ ಸರಿ. ಸದರಿ ದೂರು ನೀಡಿದ ನಂತರ ಆರೋಪಿ ಚಾಸಾ -1 ರವರಿಗೆ ಪ್ರಕರಣ ಹಿಂಪಡೆಯಲು ಬೆದರಿಕೆ ಹಾಕಿದ್ದರು ಅಂದರೆ ಸರಿ. ಆರೋಪಿ ದಿಃ 20-02-2022 ರಂದು ಗಲಾಟೆ ಮಾಡಿದಾಗ ನಾನು, ಚಾಸಾ -09 ಮತ್ತು 10 ರವರು ಜಗಳ ಬಿಡಿಸಿ ಬುದ್ಧಿವಾದ ಹೇಳಿದಾಗ ಆರೋಪಿ ನಮಗೂ ಸಹ ಬೈದಿದ್ದ ಅಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಸಿ ಎನ್ ವಕೀಲರಿಂದಃ**

ಚಾಸಾ -1 ರವರ ಕುಟುಂಬದವರು 30-35 ವರ್ಷಗಳಿಂದ ಪರಿಚಯ. ಚಾಸಾ -1 ರವರ ತಾಯಿ ನನಗೆ ಆತ್ಮೀಯರು ಅಂದರೆ ಸರಿ. ನಾನು ಮತ್ತು ಚಾಸಾ -1 ರವರ ತಾಯಿ ಒಂದೇ ಊರಿನವರು ಅಂದರೆ ಸರಿ. ನಾನು ಈ ದಿನ ಚಾಸಾ -1 ರವರೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಮತ್ತು ನಾನು ಬೇರೆ ಬೇರೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಜಗಳವನ್ನು ಕಣ್ಣಾರೆ ನೋಡಿಲ್ಲ ಅಂದರೆ ಸರಿಯಲ್ಲ. ಘಟನೆ ಯಾವ ರೀತಿ ಆಗಿತ್ತು ಎಂದು ನನಗೆ ಯಾವುದೇ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಗಂಡ ಹೆಂಡತಿಯ ಜಗಳದಲ್ಲಿ ಸದರಿ ಘಟನೆ ಆಗಿರುತ್ತದೆ.

ಆರೋಪಿ ಚಾಸಾ -1 ರವರ ತಾಯಿಗೆ ಮತ್ತು ಅಕ್ಕಳಿಗೆ ನಿಂದಿಸಿದಾಗ ಮತ್ತು ಅವರೊಂದಿಗೆ ಜಗಳ ತೆಗೆದಾಗ ಅವರುಗಳು ಪ್ರತ್ಯೇಕವಾಗಿ ದೂರು ನೀಡಿರುವುದಿಲ್ಲ. ಆರೋಪಿ ನನಗೆ ಮತ್ತು ನನ್ನ ಹೆಂಡತಿಗೆ ಬೈದ ಎಂದು ನಾವುಗಳು ಪ್ರತ್ಯೇಕವಾಗಿ ದೂರು ದಾಖಲಿಸಿಲ್ಲ.

ನಾನು ಚಾಸಾ -1 ಮತ್ತು ಆರೋಪಿ ಹೊಸಲಿಂಗಾಪುರದಲ್ಲಿ ವಾಸವಿದ್ದ ಮನೆಗೆ ಯಾವತ್ತೂ ಹೋಗಿರುವುದಿಲ್ಲ. ಚಾಸಾ -1 ರವರ ತಾಯಿಯೊಂದಿಗೆ ಅವರಿಗೆ

ಬುದ್ದಿವಾದ ಹೇಳಲು ಹೊಸಲಿಂಗಾಪುರ ಹೋಗಿಲ್ಲ. ಹೊಸಲಿಂಗಾಪುರದಲ್ಲಿ ಏನೆಲಾಲ ಘಟನೆಗಳಾಗಿದೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ, ಚಾಸಾ -1 ನನಗೆ ಆತ್ಮೀಯರಾಗಿರುವುದರಿಂದ ಅವರ ಮಾತು ಕೇಳಿ ಘಟನೆ ನಡೆದಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಚಾಸಾ -1 ಆರೋಪಿಯ ವಿರುದ್ದ ಜೀವನಾಂಶ ಪರಿಹಾರ ಕೋರಿ ದಾಖಲಿಸಿರುವ ಪ್ರಕರಣದ ಬಗೆಗ ನನಗೆ ಮಾಹಿತಿ ಇಲ್ಲ. ಸದರಿ ಜೀವನಾಂಶ ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಚಾಸಾ -1 ರವರು ಆರೋಪಿಯ ವಿರುದ್ದ ಸುಳ್ಳು ದೂರುಗಳನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. ಅದಕ್ಕನುಗುಣವಾಗಿ ನಾನು ಚಾಸಾ -1 ರವರಗಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಚಾಸಾ -1 ಮತ್ತು ಆರೋಪಿ ಪ್ರೇಮ ವಿವಾಹ ಆಗಿರುತ್ತಾರೆ ಅಂದರೆ ಸರಿ. ಆರೋಪಿಯ ಹವ್ಯಾಸಗಳು ಚಾಸಾ -1 ರವರಿಗೆ ಮದುವೆಗೂ ಮೊದಲು ಗೊತ್ತಿತ್ತು ಅಂದರೆ ಸರಿಯಲ್ಲ. ಆರೋಪಿ ಚಾಸಾ -1 ರವರಿಗೆ ಬಂಗಾರ ಖರೀದಿಸಲು ಮತ್ತು ಅವರ ತಾಯಿ ಮನೆ ಕಟ್ಟಿಸಲು ಹಣ ಕೊಟ್ಟಿದ್ದ ಅಂದರೆ ನನಗೆ ಗೊತ್ತಿಲ್ಲ. ಆರೋಪಿ ಚಾಸಾ -1 ರವರಿಗೆ ಸಂಸಾರ ಮಾಡಲು ಬನ್ನಿ ಎಂದು ನೋಟಿಸ್ ಕಳುಹಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ದಿಃ 20-02-2022 ರಂದಾಗಲೀ ಅದಕ್ಕೂ ಮೊದಲಾಗಲೀ ಯಾವತ್ತೂ ಸಹ ಚಾಸ -1 ರವರ ಮನೆಯ ಹತ್ತಿರ ಹೋಗಿ ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ವತ್ತು ಯಾವುದೇ ರೀತಿಯಿಂದ ಕಿರುಕುಳ ನೀಡಿಲ್ಲ ಅಂದರೆ ಸರಿಯಲ್ಲ. ನಾನುಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ಚಾಸಾ -1 ರವರ ತಾಯಿಗೆ ನಾನು ಆತ್ಮಿಯನಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಚಾಸಾ -1, ಅವರ ಅಕ್ಕ, ತಾಯಿ ಮತ್ತು ನಮಗೆ ಯಾವತ್ತೂ ಬೈದಿಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.